ಸಿಸಿ.ನಂ.1887/2025

ಪಿ ಡಬ್ಲ್ಯೂ-1

<u>ದಿಃ**18.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ C.B., ವಕೀಲರಿಂದಃ-

ಆರೋಪಿ ಪಲ್ಲಾಗಟ್ಟೆ ಗ್ರಾಮದವರು ಇರುತ್ತಾರೆ ಎಂದರೆ ಸರಿ. ಆರೋಪಿ ನನಗೆ ಕಳೆದ 10 ವರ್ಷದಿಂದ ಪರಿಚಯ ಎಂದರೆ ಸಾಕ್ಷಿ 4 ವರ್ಷದಿಂದ ಪರಿಚಯ ಎಂದು ಹೇಳುತ್ತಾರೆ . ನನಗೆ ದಿಃ 28.07.2022 ರಂದು ಮಣಿಪಾಲ್ ಆಸ್ಪತ್ರೆಯಲ್ಲಿ ಗಂಟಲು ಶಸ್ತ್ರಚಿಕಿತ್ಸೆ ಆಗಿರುತ್ತದೆ ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿಯೇ ನನ್ನನ್ನು ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಸನ್ **2022** ರಿಂದಲೂ ಆರೋಪಿಯಾಂದಿಗೆ ನಾನು ಆತ್ಮೀಯತೆಯಿಂದ ಇರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಆಸಗೋಡು ಮತ್ತು ಪಲ್ಲಾಗಟ್ಟೆ ಗ್ರಾಮ ಪಂಚಾಯತಿಯಲ್ಲಿ ಸಿವಿಲ್ ಗುತ್ತಿಗೆದಾರರಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಮ್ಮ ಮನೆಯಲ್ಲಿ ಯಾವುದೇಕಾರ್ಯ ಆದರೂ ಸಹ ಆರೋಪಿಯನ್ನು ಬಿಟ್ಟು ನಾವು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಸಿವಿಲ್ ಕಾಂಟ್ರಕ್ಟ್ ಕೆಲಸಕ್ಕೆ ಸನ್ 2022-23 ರಲ್ಲಿ 10 ಸಾವಿರ ಸಾಲ ಪಡೆದಿರುತ್ತಾರೆ ಎಂರೆ ಸಾಕ್ಷಿ 8 ಲಕ್ಷ 50 ಸಾವಿರ ಪಡೆದಿರುತ್ತಾರೆ ಎಂದು ಹೇಳುತ್ತಾರೆ . ಆರೋಪಿಗೆ ಸಾಲ ನೀಡಿರುವ ಹಾಗೆ ನಾನು ತಿಮ್ಮೇಶ್ ಆಸಗೋಡು ಗ್ರಾಮ ಪಂಚಾಯತಿ ಪಿಡಿಓ ರವರಿಗೂ ಸಹ **14** ಲಕ್ಷ ಸಾಲವನ್ನು ನೀಡಿರುತ್ತೇನೆ **,** ಸದರಿ ವಿಚಾರವಾಗಿ **C.C. 7/2025** ಪ್ರಕರಣ ಈ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ತಿಮ್ಮೇಶ್ ಅವರಿಗೆ ಈ **5** ವರ್ಷದ ಹಿಂದೆ ಸದರಿ **14** ಲಕ್ಷ ಹಣವನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ **.** ಆರೋಪಿಯು ನನ್ನಿಂದ **10** ಲಕ್ಷಸಾಲವನ್ನು ಪಡೆದುಕೊಂಡ ತೀರುವಳಿಗಾಗಿ ದಿಃ **22.11.2023** ರಂದು ಚೆಕ್ ಸಂಖ್ಯೇ **432028** ಮೂಲಕ **9** ಸಾವಿರ ಹಣವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ **17.01.2023** ರಂದು ಚೆಕ್ ಸಂಖ್ಯೇ **268632** ಮೂಲಕ **6** ಲಕ್ಷ ಹಣವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಅದೇದಿನದಂದು ಚೆಕ್ ಸಂಖ್ಯೇ **268634** ಮೂಲಕ **20** ಸಾವಿರ ಹಣವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು

ಸಿಸಿ.ನಂ.1887/2025

ಪಿ ಡಬ್ಲ್ಯೂ-1

ನನಗೆ ಒಟ್ಟು 7 ಲಕ್ಷ 10 ಸಾವಿರ ಹಣವನ್ನು ಜಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕೇವಲ 2 ಲಕ್ಷದ 90 ಸಾವಿರ ಹಣವನ್ನು ನೀಡುವ ಬಾಕಿ ಉಳಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನಗೂ ಮತ್ತು ಆರೋಪಿಗೂ ಹಣದ ವ್ಯವಹಾರದ ಬಗ್ಗೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನಾನು ಸದರಿ 2 ಲಕ್ಷ 90 ಸಾವಿರ ತಿರುವಳಿಗಾಗಿ ನಿಪಿ 1 ಖಾಲಿ ಚೆಕ್ ಅನ್ನು ಆರೋಪಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ 1 ಖಾಲಿ ಚೆಕ್ ನೀಡಿದ ನಂತರ ಆರೋಪಿಯು ದಿಃ 25.03.2024 ರಂದು ಚೆಕ್ ಸಂಖ್ಯೆ 268642 ಮೂಲಕ 2 ಲಕ್ಷ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ದಿಃ 26.03.2024 ರಂದು ಚೆಕ್ ಸಂಖ್ಯೆ 268645 ಮೂಲಕ 50 ಸಾವಿರ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಈ ಮೇಲೆ ತಿಳಿಸಿರುವ ಹಾಗೆ ಚೆಕ್ ಗಳು ನನ್ನ ಖಾತೆಗೆ ಜಮೆ ಆಗಿದ್ದು ಒಟ್ಟು 9 ಲಕ್ಷದ 50 ಸಾವಿರ ರೂಪಾಯಿ ಹಣವನ್ನು ವಾಪಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮತ್ತು ಆರೋಪಿಗೆ ಕೇವಲ 50 ಸಾವಿರ ಹಣ ಮಾತ್ರ ಬಾಕಿ ಉಳಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು